

# ವಧುವಿಗೆ ವಜ್ರದ ನೆಕ್ಲೆಸ್

ವಧುವಿಗಾಗಿಯೇ ವಿಶೇಷವಾಗಿ ರೂಪಿಸಿದ ವಜ್ರಾಭರಣಗಳು ಇಂದಿನ ಟ್ರೆಂಡ್‌ಗೆ ತಕ್ಕಂತೆ ಹಲವು ವಿನ್ಯಾಸಗಳಲ್ಲಿ ಲಭ್ಯ. ಸ್ಪಾರ್ಕ್ಲಿಂಗ್ ಡೈಮಂಡ್, ಸ್ಟೇಟ್‌ಮೆಂಟ್ ಪೀಸ್ ಮುಂತಾದವು ಮದುಮಗಳ ಅಲಂಕಾರಕ್ಕಾಗಿಯೇ ರೂಪಿಸಿದಂಥವು.

■ ಯು.ಅನಂತ್

ಜೀವನದ ಪ್ರಮುಖ ಘಟ್ಟವಾದ ಮದುವೆ ದಿನ ವಧುವರರಿಬ್ಬರೂ ಇಡೀ ಕಾರ್ಯಕ್ರಮದ ಕೇಂದ್ರಬಿಂದುಗಳು. ಅಂದು ವಿಶೇಷ ಉಡುಪಿನ ಜತೆಗೆ ಮದುವೆಗಾಗಿಯೇ ವಿನ್ಯಾಸ ಮಾಡಿ ವಿಶೇಷ ವಜ್ರದ ಒಡವೆಗಳನ್ನು ಧರಿಸಿದರೆ ಅದು ಅಂದಿನ 'ವಿಶೇಷ ದಿನ'ಕ್ಕೆ ಮತ್ತಷ್ಟು ಮೆರುಗು ನೀಡಿ ಕಳೆ ಕಟ್ಟುತ್ತದೆ.



ಕೆಲವೊಂದು ಆಭರಣ ವಿನ್ಯಾಸಕಾರರು ಮತ್ತು ಮಳಿಗೆಗಳು ವಧೂವರರಿಗಾಗಿಯೇ ಪರಂಪರೆಯ ಆಭರಣಕ್ಕೆ ಆಧುನಿಕ ಸ್ಪರ್ಶ ನೀಡಿ ಆಭರಣ ವಿನ್ಯಾಸಗೊಳಿಸಿವೆ. ಮದುವೆ ದಿನ ದುಬಾರಿ ಉಡುಗೆ ಜತೆಗೆ ಹೊಳಪುಳ್ಳ ವಜ್ರಾಭರಣದ ಸೆಟ್ ಧರಿಸಿಕೊಳ್ಳುವುದು ಇಂದಿನ ಟ್ರೆಂಡ್ ಕೂಡ ಆಗಿದೆ.

ಶ್ರೀಮಂತರ ಮದುವೆಗಳನ್ನು ನೋಡಿ. ವಧೂವರರಿಬ್ಬರು ವಜ್ರದ ಒಡವೆಗಳಿಂದಲೇ ಮಿಂಚುತ್ತಿರುತ್ತಾರೆ. ಇದೀಗ ಮದುಮಗಳ ಶೃಂಗಾರಕ್ಕಾಗಿಯೇ ವೈವಿಧ್ಯಮಯ ವಿನ್ಯಾಸಗಳ ವಜ್ರದ ಆಭರಣ ಬಂದಿದೆ. ವಧುವೇ ಆಕೆಯ ವಿಶೇಷ ದಿನಕ್ಕಾಗಿ ಒಡವೆಗಳನ್ನು ಆಯ್ದುಕೊಳ್ಳಬಹುದು. ತನಗೆ ಇಷ್ಟ ಬಂದ ವಿನ್ಯಾಸವನ್ನು ಮಾಡಿಸಿಯೂ ಮದುವೆ ದಿನ ತೊಟ್ಟುಕೊಳ್ಳಬಹುದು.

'ಉತ್ತರ ಭಾರತೀಯರು ಮದುವೆ ದಿನ ಧರಿಸುವುದಕ್ಕಾಗಿ ದಕ್ಷಿಣ ಭಾರತೀಯ ಶೈಲಿಯ ಒಡವೆಗಳನ್ನು ಇತ್ತೀಚೆಗೆ ಇಷ್ಟಪಡುತ್ತಿದ್ದಾರೆ. ದಕ್ಷಿಣ ಭಾರತೀಯ ಯುವತಿಯರು 'ಮಾಂಗ್ಟಿಕಾ'ದಂತಹ ಒಡವೆಗೆ ಆದ್ಯತೆ ನೀಡುತ್ತಿದ್ದಾರೆ. 'ಮಾಂಗ್ಟಿಕಾ'ದಿಂದ ಪೆಂಡೆಂಟ್ ಮತ್ತು ಓಲೆಗಳನ್ನು ತೆಗೆದು ಪ್ರತ್ಯೇಕವಾಗಿಯೂ ಧರಿಸಿಕೊಳ್ಳಬಹುದು' ಎಂದು ಹೇಳುತ್ತಾರೆ ಕೀರ್ತಿಲಾಲ್ ಜ್ಯುವೆಲ್ಲರಿಯ ವಿನ್ಯಾಸ ವಿಭಾಗದ ನಿರ್ದೇಶಕಿ ಸೀಮಾ ಮೆಹ್ತಾ.

ಸ್ಪಾರ್ಕ್ಲಿಂಗ್ ಡೈಮಂಡ್: ಮದುಮಗಳು ಯಾವತ್ತೂ ಬಯಸುವ ಅತ್ಯಂತ ಹೊಳಪುಳ್ಳ ಒಡವೆ ಇದು. ವಜ್ರ ಮತ್ತು ಎಮರಾಲ್ಡ್‌ಗಳನ್ನು ಬಳಸಿ ವಿನ್ಯಾಸ ಮಾಡುವ ಈ ಒಡವೆ ಕ್ಲಾಸಿಕ್ ಫ್ಯಾಷನ್ ಆಗಿದೆ. ನೆಕ್ಲೆಸ್ ಮತ್ತು ಜುಮ್ಕಾಗಳು ಕೆಂಪು, ನೇರಳೆ ಮತ್ತು ಹೊನ್ನಿನ ಬಣ್ಣದ ಸೀರೆ ಅಥವಾ ಲೆಹಂಗಾಗಳಿಗೆ ಅತ್ಯಂತ ಸೂಕ್ತವಾಗಿ ಒಪ್ಪುವಂಥದ್ದು.

ಸ್ಟೇಟ್‌ಮೆಂಟ್ ಪೀಸ್; ಮದುವೆಯ ಹೆಣ್ಣು ವಜ್ರದಿಂದ ಮಾಡಿದ ಕನಿಷ್ಠ ಎರಡು ಸ್ಟೇಟ್‌ಮೆಂಟ್ ಪೀಸ್ ಅನ್ನು ಧರಿಸಿಕೊಳ್ಳಲೇಬೇಕು. ಮಾಂಗ್ಟಿಕಾ (ತೋಳ್ಬಂದಿ) ವಿಭಿನ್ನ ಮತ್ತು ವಿಶಿಷ್ಟ ಲುಕ್ ಕೊಡುತ್ತದೆ.

'ಪರಂಪರೆಯ ಆಭರಣ ಮತ್ತೆ ಫ್ಯಾಷನ್ ಆಗಿದೆ. ಸಾಂಪ್ರದಾಯಿಕ ಒಡವೆಗಳು ಆಧುನಿಕ ಸ್ಪರ್ಶದೊಂದಿಗೆ ಮತ್ತೆ ಫ್ಯಾಷನ್ ಜಗತ್ತಿಗೆ ಎಡತಾಕಿದೆ. ಚಿನ್ನದ ಮೇಲೆ ರೋಸ್‌ಕಟ್ ಡೈಮಂಡ್ ಮತ್ತು ರೂಬಿ

